**<u>ತಾ:29-08-2022 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿಪರ ಶ್ರೀ.ಎಮ್.ಎಸ್.ವಕೀಲರಿಂದಃ</u>**

1. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಾನು ಬೆರಳಚ್ಚು ಮಾಡಿಸಿದ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ನಿಪಿ.1 ಅನ್ನು ನಾನು ನಂದಗುಡಿಯಲ್ಲಿ ಬೆರಳಚ್ಚು ಮಾಡಿಸಿದ್ದು, ಅದನ್ನು ಯಾರು ಬೆರಳಚ್ಚು ಮಾಡಿರುತ್ತಾರೆಂದು ಅವರ ಹೆಸರು ಹೇಳಲು ನನಗೆ ಆಗುವುದಿಲ್ಲ. ನಿಪಿ.1 ಅನ್ನು ನಾನು ಬೆರಳಚ್ಚು ಮಾಡಿಸಿದಾಗ ಚಾಸಾ.2 ಮತ್ತು 3 ರವರು ಇದ್ದರು. ನಿಪಿ.1 ಅನ್ನು ಬೆರಳಚ್ಚು ಮಾಡಿಕೊಟ್ಟವರ ಹೆಸರನ್ನು ನಾನು ಪೋಲೀಸರಿಗೆ ತಿಳಿಸಿಲ್ಲ. ನನಗೆ ಬರೆಯಲು ಬರುತ್ತಿದ್ದ ಕಾರಣ, ದೂರನ್ನು ಕೈನಲ್ಲಿ ಬರೆದು ಕೊಡಬಹುದಿತ್ತು ಎಂದರೆ ಸಾಕ್ಷಿಯು ದೂರು ಬರೆದುಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ. ದಿನಾಂಕ 13-10-2018 ರಂದು ರಾತ್ರಿ 08:00 ಗಂಟೆಗೆ ನಿಪಿ.1 ಅನ್ನು ಬೆರಳಚ್ಚು ಮಾಡಿಸಿರುತ್ತೇನೆ. ದೂರನ್ನು ರಾತ್ರಿ 08:30 ಕ್ಕೆ ಹೋಗಿ ಪೋಲೀಸ್ ಠಾಣೆಗೆ ಸಲ್ಲಿಸಿರುತ್ತೇನೆ.

2. ನಾನು ಮೊದಲಿಗೆ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು, ಸಮಯ ಎಷ್ಟು ಎಂದು ತಿಳಿದಿಲ್ಲ. ಆಸ್ಪತ್ರೆಯ ವೈದ್ಯರಿಗೆ ಘಟನೆ ಹೇಗೆ ಆಗಿರುತ್ತದೆ ಎಂದು ನಾನು ತಿಳಿಸಿರುತ್ತೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನಂತರ ನಾನು ಪೋಲೀಸ್

ಠಾಣೆಗೆ ಹೋಗಿರುತ್ತೇನೆ. ಸಾಕ್ಷಿಯು ಪುನಃ ನಾನು ಆಸ್ಪತ್ರೆಯಿಂದ ಬಂದ ನಂತರ ದೂರನ್ನು ಟೈಪ್ ಮಾಡಿಸಿಕೊಂಡು ನಂತರ ಪೋಲೀಸ್ ಠಾಣೆಗೆ ಹೋಗಿರುವುದಾಗಿ ನುಡಿದಿರುತ್ತಾರೆ. ಆಸ್ಪತ್ರೆಯವರು ನನಗೆ ಚಿಕಿತ್ಸೆ ನೀಡಿದ ಬಗ್ಗೆ ರಶೀದಿ ನೀಡಿದ್ದು, ನಾನು ಅದನ್ನು ಪೋಲೀಸರಿಗೆ ನೀಡಿಲ್ಲ. ನಾನು ಪೋಲೀಸರ ಬಳಿ ಹೋದಾಗ ಯಾವ ಆಸ್ಪತ್ರೆಯಲ್ಲಿ ಎಷ್ಟು ಗಂಟೆಗೆ ಚಿಕಿತ್ಸೆ ಪಡೆದಿರುತ್ತೇನೆ ಎಂದು ದಾಖಲೆ ಹಾಜರು ಪಡಿಸಿರುತ್ತೇನೆ. ನಿಪಿ.3 ರಿಂದ 6ರ ಫೋಟೋಗಳನ್ನು ನಾನೇ ಪೋಲೀಸರಿಗೆ ನೀಡಿರುತ್ತೇನೆ. ನಾನು ಸದರಿ ಫೋಟೋಗಳನ್ನು ನಂದಗುಡಿಯಲ್ಲಿ ತೆಗೆಸಿದ್ದು, ಅದರ ಬಗ್ಗೆ ರಶೀದಿಯನ್ನು ಪೋಲೀಸರಿಗೆ ನೀಡಿಲ್ಲ. ನಾನು ಹೇಳಿದಂತಹ ಫೋಟೋ ಸ್ಟುಡಿಯೋ ಪೋಲೀಸ್ ಠಾಣೆಯ ಪಕ್ಕದಲ್ಲಿ ಇರುತ್ತದೆ. ಸದರಿ ಫೋಟೋ ಸ್ಟುಡಿಯೋ ಹೆಸರು ಹಾಗೂ ಫೋಟೋ ತೆಗೆದವರ ಹೆಸರನ್ನು ನಾನು ಪೋಲೀಸರಿಗೆ ತಿಳಿಸಿಲ್ಲ. ನಿಪಿ.3 ರಿಂದ 6ರ ಫೋಟೋಗಳಿಗೆ ಸಂಭಂದಿಸಿದ ಸಿ.ಡಿ ಯನ್ನು ಪಡೆದು ಪೋಲೀಸರಿಗೆ ನೀಡಲು ನಾನು ಪ್ರಯತ್ನಿಸಿಲ್ಲ. ಸರ್ವೆ ನಂ.171ಕ್ಕೆ ಸಂಭಂದಿಸಿದ ದಾಖಲಾತಿಯನ್ನು ನಾನು ಪೋಲೀಸರಿಗೆ ನೀಡಿಲ್ಲ.

3. ನಿಪಿ.2 ಸ್ಥಳ ಪಂಚನಾಮೆಯನ್ನು ಪೋಲೀಸರು ತಯಾರು ಮಾಡಿದ್ದು, ಅದಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2ರ ವಸ್ತುಗಳ ಮೇಲೆ ಚೀಟಿ ಅಂಟಿಸಿ ನನ್ನ ಸಹಿ ಪಡೆದಿರುತ್ತಾರೆ. ಸಾಮಾನ್ಯವಾಗಿ ಮು.ಮಾ.1 ಮತ್ತು 2 ರ ವಸ್ತುಗಳು ಗ್ರಾಮಗಳಲ್ಲಿ ಸಿಗುತ್ತವೆ ಎಂದರೆ ಸರಿ. ಘಟನೆಯಲ್ಲಿ ನನ್ನ ಬಟ್ಟೆ ರಕ್ತ ಆಗಿತ್ತು. ಪೋಲೀಸರು ರಕ್ತ ಆಗಿದ್ದ ನನ್ನ

ಬಟ್ಟೆಗಳನ್ನು ಜಪ್ತಿ ಪಡಿಸಿಲ್ಲ, ನಾನು ಸಹ ರಕ್ತ ಆಗಿದ್ದ ನನ್ನ ಬಟ್ಟೆಗಳನ್ನು ಪೋಲೀಸರಿಗೆ ನೀಡಿಲ್ಲ. ನಿಪಿ.2 ಪಂಚನಾಮೆಯನ್ನು ಪೋಲೀಸರು ಮಾಡಿದ ಸಮಯ ನನಗೆ ನೆನಪಿಲ್ಲ ಆದರೆ 14 ನೇ ತಾರೀಖಿನಂದು ಮಾಡಿರುತ್ತಾರೆ. ಆ ಸಮಯದಲ್ಲಿ ಪೋಲೀಸರು ಪಂಚಸಾಕ್ಷಿದಾರರಿಗೆ ನೋಟೀಸ್ ಕೊಟ್ಟು ಸ್ಥಳಕ್ಕೆ ಕರೆಸಿಲ್ಲ. ಪೋಲೀಸರೇ ಮು.ಮಾ.1 ಮತ್ತು 2 ರ ವಸ್ತುಗಳನ್ನು ಸ್ಥಳಕ್ಕೆ ತೆಗೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿಯು ಇಲ್ಲ ನಾನೇ ಕೊಟ್ಟಿರುವುದಾಗಿ ಉತ್ತರಿಸಿರುತ್ತಾರೆ. ಮು.ಮಾ.1 ಮತ್ತು 2 ಅನ್ನು ನಾನು ಗಲಾಟೆ ಆದ ಜಾಗದಲ್ಲಿ ತೆಗೆದುಕೊಟ್ಟಿರುತ್ತೇನೆ.

4. 4 ಮತ್ತು 5 ನೇ ಆರೋಪಿತರಿಗೆ 70 ಅಥವಾ 80 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಅವರಿಬ್ಬರೂ ಅನಾರೋಗ್ಯ ದಿಂದ ಬಳಲುತ್ತಿದ್ದು, ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನೆ ಆಗಿರುತ್ತದೆ ಎಂದು ಹೇಳಿದ ಸ್ಥಳದಲ್ಲಿ 10-20 ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು 6 ಮನೆ ಇರುವುದಾಗಿ ನುಡಿದಿರುತ್ತಾರೆ. ಸದರಿ ಸ್ಥಳದಲ್ಲಿ ಸಾಕಷ್ಟು ಜನ ಸಂಚಾರು ಇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿದ ಸ್ಥಳದಲ್ಲಿ ಶಬ್ಧ ಆದಲ್ಲಿ ಅಥವಾ ಕೂಗಾಟ ಆದಲ್ಲಿ ಎಲ್ಲರಿಗೂ ಕೇಳಿಸುತ್ತದೆ ಎಂದರೆ ಸರಿ. ಚಾಸಾ.3 ರವರ ಮನೆಯನ್ನು ಹೊರತುಪಡಿಸಿ ಇನ್ನೂ ಬೇರೆ ಬೇರೆ ಯವರಿಗೆ ಸೇರಿದ ಮನೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಚಾಸಾ.6 ಮತ್ತು 7 ರವರ ಮನೆ ಇಲ್ಲ ಎಂದರೆ ಸರಿ. ಗಲಾಟೆ ಆಗಿರುತ್ತದೆ ಎಂದು ಸ್ಥಳದಿಂದ ಸುಮಾರು 1 ಕಿ.ಮೀ.ದೂರದಲ್ಲಿ ಚಾಸಾ.6 ಮತ್ತು 7 ರವರ ಮನೆ ಇರುತ್ತದೆ ಎಂದರೆ ಸರಿ. ನಾನು ಉದ್ದೇಶಪೂರಕವಾಗಿ ಆರೋಪಿತರ ವಿರುದ್ಧ ಸುಳ್ಳು

ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ಸರ್ವೆ ನಂ.171 ರ ಬಗ್ಗೆ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ. ಚಾಸಾ.4 ರವರಿಗೆ ಸರ್ವೆ ನಂ.171 ರ ಜಮೀನು ಸೇರಿದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಅವರ ಮನೆಯ ಮುಂದೆ ಕಾಂಪೊಂಡ್ ವಾಲ್ ಹಾಕುತ್ತಿದ್ದರು ಎಂದರೆ ಸರಿ. ಆರೋಪಿತರು ಸುಮಾರ 40 ವರ್ಷಗಳಿಂದ ಸರ್ವೆ ನಂ.171 ರಲ್ಲಿ ಮನೆ ನಿರ್ಮಿಸಿಕೊಂಡು ವಾಸ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 1 ಮತ್ತು 3 ನೇ ಆರೋಪಿತರ ಮನೆ ಇರುತ್ತದೆ. ದಿನಾಂಕ 13-10-2018 ರಂದು ಬೆಳಗ್ಗೆ 11:00 ಗಂಟೆ ಸಮಯದಲ್ಲಿ ಆರೋಪಿತರು ಅವರ ಮನೆಯ ಮುಂದೆ ಕಾಂಪೊಂಡ್ ವಾಲ್ ಹಾಕುವಾಗ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಆರೋಪಿತರು ಬೆಳಗ್ಗೆ 11:00 ಗಂಟೆಗೆ ಕೆಲಸ ಪ್ರಾರಂಭಿಸಿ ಗುಂಡಿ ತೆಗೆದು ಕಲ್ಲುಚಪ್ಪಡಿಗಳನ್ನು ಜೋಡಿಸಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ 04:00 ಗಂಟೆಗೆ ನಾನೇ ವಿನಾಕಾರಣ ಜಗಳ ತೆಗೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ಮಹಜರ್ ಮಾಡುವ ಸ್ಥಳದಲ್ಲಿ ಕಲ್ಲುಗಳು ಇರುವುದನ್ನು ನಾನು ನೋಡಿಲ್ಲ. ಅದೇ ರೀತಿ ಗುಂಡಿಗಳನ್ನು ತೆಗೆದು ಕಲ್ಲುಗಳನ್ನು ಜೋಡಿಸುವುದನ್ನು ನಾನು ಗಮನಿಸಿರುತ್ತೇನೆ. ನಿಪಿ.2 ಅನ್ನು ಮಾಡುವ ಸಮಯದಲ್ಲಿ ಸ್ಥಳದಲ್ಲಿ ಏನೇನು ಇತ್ತು ಎಂದು ನಾನು ಗಮನಿಸಿಲ್ಲ ಎಂದರೆ ಸರಿಯಲ್ಲ.

6. ಮು.ಮಾ.1 ಮತ್ತು 2 ಅನ್ನು ನಾನು ಘಟನಾ ಸ್ಥಳದಿಂದ ಪೋಲೀಸರ

ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮೃತ 3 ನೇ ಆರೋಪಿಯೂ ಸಹ ಯಾರಿಗೂ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯೂ ಸಹ ಯಾರಿಗೂ ಹಲ್ಲೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ನನ್ನ ಚಿಕ್ಕಪ್ಪನಿಗೆ ಹಲ್ಲೆ ಮಾಡಿರುವುದಾಗಿ ಉತ್ತರಿಸಿರುತ್ತಾರೆ. 5 ರಿಂದ 7 ನೇ ಆರೋಪಿತರು ನಮಗ್ಯಾರಿಗೂ ಹಲ್ಲೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಕೈ ಕಾಲಿನಿಂದ ಹಲ್ಲೆ ಮಾಡಿರುವುದಾಗಿ ಉತ್ತರಿಸಿರುತ್ತಾರೆ. ನಾನು ಕಲ್ಲಿನ ಮೇಲೆ ಬಿದ್ದು ಗಾಯಮಾಡಿಕೊಂಡಿದ್ದು ಆರೋಪಿತರೇ ಹಲ್ಲೆ ಮಾಡಿರುವುದಾಗಿ ಪೋಲೀಸರಿಗೆ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆದಂತಹ ಗಾಯಗಳು ಯಾವುದೇ ಆರೋಪಿತರು ಮಾಡಿದಂತಹ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ.

7. ಆರೋಪಿತರು ಮು.ಮಾ.1 ಮತ್ತು 2 ಅನ್ನು ಸ್ಥಳದಲ್ಲೆ ಬಿಟ್ಟು ಹೋಗಿರುವುದಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು ಮು.ಮಾ.1 ಮತ್ತು 2 ರ ವಸ್ತುಗಳಿಂದ ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿತರು ಮು.ಮಾ.1 ಮತ್ತು 2 ಅನ್ನು ಉಪಯೋಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಆರೋಪಿ ನನಗೆ ಹೊಡೆದು ಗಾಯಗೊಳಿಸಿರುತ್ತಾರೆಂದು ವೈದ್ಯರ ಬಳಿ ಹೇಳಿಲ್ಲ ಎಂದರೆ ಸರಿ. ವೈದ್ಯರು ನನಗೆ 2 ಬಾರಿ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ. 2 ನೇ ಬಾರಿ ಚಿಕಿತ್ಸೆಗೆ ಹೋದಾಗ ಗಾಯಗಳು ನನಗೆ ಯಾವ ರೀತಿ ಆಗಿರುತ್ತದೆ ಎಂದು ನಾನು ವೈದ್ಯರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕ

13-10-2018 ರಂದು ವೈದ್ಯರ ಬಳಿ ಹೋಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಜಮೀನಿನ ಬಗ್ಗೆ ವ್ಯಾಜ್ಯ ಇರುವ ಕಾರಣ ನಾನು ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಪೋಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಬರೆಯಲು ಬಾರದೇ ಇರುವ ಕಾರಣ ದೂರು ಸಲ್ಲಿಸಲು ತೊಂದರೆ ಇತ್ತು ಎಂದು ನುಡಿದಿರುತ್ತಾರೆ.

8. ನಾನು, ಚಾಸಾ.2, 3 ಹಾಗೂ ಇತರರು ಚರ್ಚೆ ಮಾಡಿ ಯಾವ ರೀತಿ ದೂರು ಕೊಡಬೇಕೆಂದು ತೀರ್ಮಾನಿಸಿ ನಂತರ ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ಅನ್ನು ನನಗೆ ಬೇಕಾದ ಹಾಗೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಯಾವುದೇ ರೀತಿಯಲ್ಲೂ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ನ್ಯಾಯಾಲಯದಿಂದ ಶಿಕ್ಷೆ ಆಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃಇಲ್ಲ</u>**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.